ಪ್ರಸ್ತಾಪ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ಮುಚ್ಚತಕ್ಕಂಥ ಕೆಲಸ ಮಾಡುವುದಿಲ್ಲ. ಅದನ್ನು ಮುಚ್ಚಿದರೆ 12 ಜಿಲ್ಲೆಗಳ ಅಭಿವೃದ್ಧಿ ಕಾರ್ಯಗಳು ನಿಂತು ಹೋಗುತ್ತವೆ. ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಆದಷ್ಟು ಬೇಗ ನಬಾರ್ಡ್ ಹಣ ಮತ್ತು ಬಾಕಿ ಇರತಕ್ಕಂಥ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ. ಇದಕ್ಕಾಗಿ ನನಗೆ ದಯಮಾಡಿ ಅವಕಾಶ ಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

## ಬೈಂದೂರು ಕ್ಷೇತ್ರದಲ್ಲಿ ಪ್ರೌಢಶಾಲೆಗಳ ಮಂಜೂರಾತಿ

102(375) ಶ್ರೀ ಗೋಪಾಲ್ ಪೂಜಾರಿ ಕೆ. (ಬೈಂದೂರು) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಸ್ಥಳಗಳಲ್ಲಿ ಪ್ರೌಢಶಾಲೆಗಳ ಮಂಜೂರಾತಿ ಕೋರಿ ಉಡುಪಿ ಜಿಲ್ಲಾ ಶಿಕ್ಷಣ ಉಪ ನಿರ್ದೇಶಕರ ಕಛೇರಿಯಿಂದ ಪ್ರಸ್ತಾವನೆ ಬಂದಿದೆ:

ಆ) ಈ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಈ ಶೈಕ್ಷಣಿಕ ವರ್ಷದಲ್ಲಿ ಮಂಜೂರಾತಿ ನೀಡಲಾಗುವುದೆ;

ಇ) ಸಾಧ್ಯವಾಗದಿದ್ದಲ್ಲಿ ಕಾರಣಗಳನ್ನು ನೀಡುವುದು?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಗೋಪಾಲ್ ಪೂಜಾರಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪ್ರಸ್ತಾವನೆ ಬಂದಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. 1998-99ರಲ್ಲಿ ಒಂದು ಪ್ರಸ್ತಾವನೆಯನ್ನು ಮತ್ತು 1999-2000ನೇ ಇಸವಿಯಲ್ಲಿ ಒಂದು ಪ್ರಸ್ತಾವನೆ ಹಾಗೂ ದಿನಾಂಕ: 20-07-2001ರಲ್ಲಿ ಒಂದು ಪ್ರಸ್ತಾವನೆ ಅಂದರೆ ಕಳೆದ ಮೂರು ವರ್ಷಗಳಿಂದ ಮೂರು ಪ್ರಸ್ತಾವನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಆದರೆ ಪ್ರಸ್ತಾವನೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ನಾನು ಏನು ಹೇಳಬೇಕು? ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನಾನು ಬಹಳ ಒತ್ತಡ ಮಾಡಿದ್ದಕ್ಕೆ ಪ್ರೌಢಶಾಲೆ ಕೊಡುತ್ತೇವೆಂದು ಈ ಸದನದಲ್ಲಿ ಉತ್ತರ ಕೊಟ್ಟರು. ಆದರೆ, ನಾನು ಕಳೆದ ಮೂರು ವರ್ಷಗಳಿಂದ ಪ್ರಸ್ತಾವನೆ ಕಳುಹಿಸಿ ಪ್ರಯತ್ನ ಮಾಡುತ್ತಿದ್ದರೂ ಸಹ ಪ್ರಸ್ತಾವನೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ತ್ರಾಸಿ ಮತ್ತು ಗುಜ್ಜಾಡಿಪುರದಲ್ಲಿ ಸಾರ್ವಜನಿಕರಿಂದ ಒಂದು ಲಕ್ಷ ರೂಪಾಯಿಯಷ್ಟು ದೇಣಿಗೆಯನ್ನು ಕಲೆಕ್ಟ್ ಮಾಡಿ ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟುಕೊಂಡಿದ್ದಾರೆ. ಅಲ್ಲದೆ ಶಾಲೆಗೆ ಬೇಕಾಗಿರತಕ್ಕಂಥ ಫರ್ನಿಚರ್‌ಗಳನ್ನು ಅಲ್ಲಿನ ಗ್ರಾಮಸ್ಥರು ಒದಗಿಸಿಕೊಡುವುದಕ್ಕೆ ಮುಂದೆ ಬಂದಿದ್ದಾರೆ. 178 ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು 5 ಪದವಿ ಪೂರ್ವ ಕಾಲೇಜು ಹಾಗೂ 5 ಪ್ರೌಢಶಾಲೆಗಳು ಅಲ್ಲಿವೆ. ಈಗ ಇರತಕ್ಕಂಥ ಹೈಸ್ಕೂಲ್‌ನಲ್ಲಿ ಕಾಲು ಹಾಕುವುದಕ್ಕೂ ಸಹ ಜಾಗವಿಲ್ಲ. ನಾನು ಪ್ರತಿ ವರ್ಷ ಪ್ರಸ್ತಾವನೆಯನ್ನು ಕಳುಹಿಸಿ ಕೊಟ್ಟರೂ ಪ್ರಸ್ತಾವನೆ ಬಂದಿಲ್ಲವೆಂದು ತಾವು ಉತ್ತರ ಕೊಟ್ಟರೆ, ನಾನು ಅಲ್ಲಿರತಕ್ಕಂಥ ಜನರಿಗೆ ಯಾವರೀತಿಯಾದ ಉತ್ತರ ಕೊಡಬೇಕೆಂದು ತಾವೇ

ಹೇಳಿ? ಅಲ್ಲಿಗೆ ಹೈಸ್ಕೂಲ್‌ನ್ನು ಯಾವಾಗ ಕೊಡುತ್ತೀರಿ ಎನ್ನತಕ್ಕಂಥದನ್ನು ಈ ಸದನದ ಮೂಲಕ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಪ್ರೊ ಬಿ.ಕೆ. ಚಂದ್ರಶೇಖರ್:- ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತಿದ್ದೇನೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ಇಲಾಖೆ ಮತಿಯಿಂದ ಪ್ರಸ್ತಾವನೆ ಬಂದಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಗೋಪಾಲ ಪೂಜಾರಿ:- ಮಾನ್ಯ ಅಧ್ಯಕ್ಷರೆ, ವಿದ್ಯಾ ಇಲಾಖೆ ಮತಿಯಿಂದಲೇ ಬಂದಿದೆ.

ಪ್ರೊ ಬಿ.ಕೆ. ಚಂದ್ರಶೇಖರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಈ ಪ್ರಶ್ನೆಗೆ ಇಲಾಖೆಯಿಂದ ಈ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗೆಯೇ ಇಲಾಖೆ ಮತಿಯಿಂದ ಪ್ರಸ್ತಾವನೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಒಂದು ವೇಳೆ ಪ್ರಸ್ತಾವನೆ ಬಂದಿಲ್ಲದೆ ಇದ್ದರೂ ಸಹ ಅತ್ಯಂತ ಅವಶ್ಯಕತೆ ಇರುವ ಸ್ಥಳದಲ್ಲಿ ಹೈಸ್ಕೂಲ್ ಪ್ರಾರಂಭ ಮಾಡುವುದಕ್ಕೆ ಮಾಹಿತಿಯನ್ನು ತರಿಸಿಕೊಳ್ಳಿ ಎಂದು ನಾನು ಈಗಾಗಲೇ ತಿಳಿಸಿದ್ದೇನೆ. ಆ ಪ್ರಸ್ತಾವನೆ ಇಲ್ಲದಿದ್ದರೂ ಕೂಡ ಇಲಾಖೆ ಮತಿಯಿಂದ ನಾನು ಪ್ರಸ್ತಾವನೆಯನ್ನು ತರಿಸಿಕೊಳ್ಳುತ್ತೇನೆಂದು ಈ ಸದನದ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಈಶಾನ್ಯ ವಲಯ ಶಿಕ್ಷಣ ನಿರ್ದೇಶನಾಲಯಕ್ಕೆ ಪ್ರಸಕ್ತ ವರ್ಷ ಸರ್ಕಾರ ನೀಡಿದ ಅನುದಾನ

173(1431) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಶಾನ್ಯ ವಲಯ ಶಿಕ್ಷಣ ನಿರ್ದೇಶನಾಲಯಕ್ಕೆ ಪ್ರಸಕ್ತ ವರ್ಷ ಸರ್ಕಾರ ನೀಡಿದ ಅನುದಾನ ಎಷ್ಟು?

ಆ) ಒದಗಿಸಲಾದ ಅನುದಾನವನ್ನು ನಿರ್ದೇಶನಾಲಯವು ಯಾವ ಉದ್ದೇಶಗಳಿಗಾಗಿ ವಿನಿಯೋಗಿಸಿದೆ?

ಇ) ಒದಗಿಸಲಾದ ಈ ಅನುದಾನದಿಂದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದೆ:ಹಾಗಿದ್ದಲ್ಲಿ ಹಾಕಿಕೊಂಡ ಗುರಿ ಎಷ್ಟು?

ಈ) ಈ ನಿರ್ದೇಶನಾಲಯದ ವ್ಯಾಪ್ತಿಗೆ ಬರುವ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಿಸಲಾಗುವುದು?

ಉ) ನಿರ್ಮಿಸಲಾಗುವ ಕಟ್ಟಡಗಳನ್ನು ಸರ್ಕಾರದ ನಿಯಮದಂತೆ ಆಯಾ ಸ್ಥಳೀಯ ಶಾಸಕರಿಂದ ಶಾಲೆಗಳ ಪಟ್ಟಿಗಳನ್ನು ಪಡೆದುಕೊಂಡು ನಿರ್ಮಿಸಲಾಗುವುದೆ?

ಊ) ಹಾಗಿದ್ದಲ್ಲಿ, ಆಯಾ ಶಾಸಕರು ತಮ್ಮ ಶಾಲೆಗಳ ಪಟ್ಟಿಯನ್ನು ಯಾರಿಗೆ ಕಳುಹಿಸಬೇಕು?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ನಿರ್ದೇಶನಾಲಯದ ವೆಚ್ಚಗಳಿಗಾಗಿ ರೂ. 40.00 ಲಕ್ಷ.

ಆ) ಒದಗಿಸಿದ ಅನುದಾನ ರೂ. 40.00 ಲಕ್ಷಗಳು ಇನ್ನೂ ಬಿಡುಗಡೆಯಾಗಿಲ್ಲ.'

ಇ) ನಿರ್ದೇಶನಾಲಯಕ್ಕೆಂದೇ ಒದಗಿಸಲಾಗಿರುವ ರೂ. 40.00 ಲಕ್ಷಗಳಲ್ಲಿ ಯಾವುದೇ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದಿಲ್ಲ. ಆದರೆ ರಾಜ್ಯ ಮುಂದುವರೆದ ಯೋಜನೆಯಡಿ